# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 712 |
| ಮಾನ್ಯ ಸದಸ್ಯರ ಹೆಸರು | ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 23.12.2022 |
| ಉತ್ತರಿಸುವ ಸಚಿವರು | ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು. |

| ಪ್ರ ಸಂ. | ಪ್ರಶ್ನೆ | ಉತ್ತರ |
|---|---|---|
| | | |
| ಅ) | 'ಲಾಳಗೊಂಡ' ಎಂಬ ಜಾತಿ/ಉಪಜಾತಿ ಎಂಬುದು ಕರ್ನಾಟಕ ರಾಜ್ಯ ಸರ್ಕಾರದ ಜಾತಿ/ಉಪಜಾತಿ ಪಟ್ಟಿಯಲ್ಲಿ ಯಾವ ಭಾಗದಲ್ಲಿ ಸೇರಿಸಲಾಗಿದೆ; ಈ ಜಾತಿಯ ಜನರು ರಾಜ್ಯದ ಯಾವ ಭಾಗದಲ್ಲಿ ಹೆಚ್ಚು ಕಂಡುಬರುತ್ತಾರೆ; (ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002ರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಲಾಳಗೊಂಡ ಜಾತಿಯು ಸೇರಿರುವುದಿಲ್ಲ. ಆದುದರಿಂದ ಲಾಳಗೊಂಡ ಜಾತಿಯು ಯಾವುದೇ ಪ್ರವರ್ಗದಡಿಯಲ್ಲಿ ಬರುವುದಿಲ್ಲ. |
| ಆ) | ಈ ಲಾಳಗೊಂಡ ಉಪಜಾತಿಯ ಜನರು ವೀರಶೈವಲಿಂಗಾಯತ ಜಾತಿ ಎಂದು ನಮೂದಿಸುತ್ತಾ ಬಂದಿದ್ದು; ಇವರು ಈ ವೀರಶೈವ ಲಿಂಗಾಯತರಲ್ಲಿ ಉಪಜಾತಿ ಎಂದು ಸೇರಿಸಲು ಇರುವ ತೊಂದರೆಗಳೇನು; ಇವರನ್ನು ವೀರಶೈವ ಲಿಂಗಾಯತರಲ್ಲಿ ಉಪಜಾತಿ ಎಂದು 'ಲಾಳಗೊಂಡ' ಸೇರಿಸಲು ಸರ್ಕಾರದ ನಿರ್ಧಾರಗಳೇನು; (ವಿವರ ನೀಡುವುದು) | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಹಿಂದಿನ ಅಧ್ಯಕ್ಷರಾಗಿದ್ದ ಶ್ರೀ ಎಸ್. ಸಿದ್ದಗಂಗಯ್ಯ ಇವರು "ಮಧ್ಯಂತರ ವರದಿ 2005" ನ್ನು ದಿನಾಂಕ: 07.03.2005 ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ವರದಿಯು ಒಟ್ಟು 34 ಸಲಹೆ/ಶಿಫಾರಸ್ಸುಗಳನ್ನೊಳಗೊಂಡಿರುತ್ತದೆ. ಸದರಿ ವರದಿಯ ಸಲಹೆ ಸಂಖ್ಯೆ: 30/2005 ರಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ 1995 ಪರಿಚ್ಛೇಧ9(1)ರಲ್ಲಿ ಪ್ರದತ್ತವಾಗಿರುವ ಅಧಿಕಾರದಂತೆ ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ಆದೇಶ ಸಂಖ್ಯೆ: ಸಕ ಇ 225 ಬಿಸಿಎ 2000 ದಿನಾಂಕ: 30.03.2002ರ ಪ್ರವರ್ಗ- III (ಬಿ)ಯ ಕ್ರಮ ಸಂಖ್ಯೆ 1(ಬಿ) ನ 23 ಲಿಂಗಾಯತ ಉಪಜಾತಿಗಳೊಂದಿಗೆ 19 ಉಪ ಜಾತಿಗಳನ್ನು ಸೇರಿಸಿ ಒಟ್ಟು 42 ಜಾತಿಗಳ ಪರಿಷ್ಕೃತ ಪಟ್ಟಿಗೆ ಪ್ರವರ್ಗ- III (ಬಿ) ಅಡಿಯಲ್ಲಿ ಈಗಾಗಲೇ ಇರುವ ಶೇ.5 ರ ಮೀಸಲಾತಿ ಮುಂದುವರೆಸಬೇಕು ಎಂದು ಆಯೋಗವು ಕರ್ನಾಟಕ ಸರ್ಕಾರಕ್ಕೆ ಸಲಹೆ ನೀಡಿರುತ್ತದೆ. ಸದರಿ ಸಲಹೆಯ ಪಟ್ಟಿಯಲ್ಲಿನ ಕ್ರಮಸಂಖ್ಯೆ:1 (ಜಡ್) ರಲ್ಲಿ ಲಿಂಗಾಯಿತ/ವೀರಶೈವ-ಲಾಳಗೊಂಡ ಜಾತಿಯು ಒಳಗೊಂಡಿರುತ್ತದೆ. |

| | | |
|---|---|---|
| | | ಸರ್ಕಾರದ ಆದೇಶ ಸಂಖ್ಯೆ ಸಕ ಇ 193 ಬಿಸಿಎ 2007 ದಿನಾಂಕ: 27.01.2009 ರ ಸೇರ್ಪಡೆ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಕ ಇ 225 ಬಿಸಿಎ 2000 ದಿನಾಂಕ: 30.03.2002ರಲ್ಲಿನ ಪ್ರವರ್ಗ- III (ಬಿ) ನ ಕ್ರಮ ಸಂಖ್ಯೆ: 1(ಬಿ) ರಡಿಯಲ್ಲಿ ವೀರಶೈವ ಲಿಂಗಾಯತ 19 ಉಪಜಾತಿಗಳನ್ನು ಸೇರ್ಪಡೆ ಮಾಡಿ ಆದೇಶಿಸಲಾಗಿದೆ. ಈ ಆದೇಶದ ಕ್ರಮಸಂಖ್ಯೆ:2 ರಲ್ಲಿ ಲಿಂಗಾಯಿತ/ವೀರಶೈವ-ಲಾಳಗೊಂಡ ಜಾತಿಯು ಸೇರ್ಪಡೆಯಾಗಿರುತ್ತದೆ.<br>ತದನಂತರ, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಕ ಇ 193 ಬಿಸಿಎ 2007 ದಿನಾಂಕ: 28.02.2009 ರ ಅಧಿಸೂಚನೆಯ ಕ್ರಮ ಸಂಖ್ಯೆ: 13 ರಲ್ಲಿ ಲಿಂಗಾಯಿತ/ವೀರಶೈವ-ಪಂಚಮಸಾಲಿ ಎಂಬುದನ್ನು ಹೊರತುಪಡಿಸಿ ಉಳಿದ 18 ಜಾತಿಗಳನ್ನು ಸೇರ್ಪಡೆ ಮಾಡಿರುವುದನ್ನು ಹಿಂಪಡೆಯಲಾಗಿದೆ. |
| ಇ) | ಕರ್ನಾಟಕ ರಾಜ್ಯದಲ್ಲಿ ಜಾತಿಗಳ ಪಟ್ಟಿಯಲ್ಲಿ ಉಪಜಾತಿಯನ್ನು ಸೇರಿಸಲು ಇರುವ ಮಾನದಂಡಗಳೇನು? (ಮಾಹಿತಿಯೊಂದಿಗೆ ಆದೇಶಗಳ ಪ್ರತಿಗಳನ್ನು ಒದಗಿಸುವುದು) | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿ ನಿಯಮ 1995ರ ಕಲಂ 9(1) (i) ರಂತೆ ನಾಗರಿಕರ ಯಾವುದೇ ವರ್ಗವನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಬೇಕೆಂದು ಸ್ವೀಕೃತವಾಗಿರುವ ಕೋರಿಕೆಗಳನ್ನು ಪರಿಶೀಲಿಸುವುದು ಮತ್ತು ಯಾವುದೇ ಹಿಂದುಳಿದ ವರ್ಗವನ್ನು ಅಂಥ ಪಟ್ಟಿಯಲ್ಲಿ ಹೆಚ್ಚಾಗಿ ಸೇರಿಸಲಾಗಿದೆ ಎಂದು ಅಥವಾ ಸೇರಿಸಲಾಗಿಲ್ಲವೆಂದು ಬಂದ ದೂರುಗಳ ವಿಚಾರಣೆ ಮಾಡುವುದು ಮತ್ತು ಸರ್ಕಾರಕ್ಕೆ ಅದು ಸಮುಚಿತವೆಂದು ಭಾವಿಸುವಂಥ ಸಲಹೆಯನ್ನು ನೀಡುವುದು;<br>ಈ ಸಂಬಂಧದಲ್ಲಿ ಆಯೋಗವು ಜಾತಿ/ ಸಮುದಾಯಗಳ ಬಹಿರಂಗ ವಿಚಾರಣೆಯನ್ನು ಏರ್ಪಡಿಸಿ ಮಾಹಿತಿಯನ್ನು ಸಂಗ್ರಹಿಸಿ, ಸ್ಥಳಪರಿಶೀಲನೆ ಕೈಗೊಂಡು ಸದರಿ ಜಾತಿ/ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕ ಸ್ಥಿತಿಗತಿಗಳನ್ನು ಆಧರಿಸಿ ಸರ್ಕಾರಕ್ಕೆ ಸಲಹೆ ನೀಡುತ್ತದೆ. |

**ಸಂಖ್ಯೆ:ಹಿಂವಕ 250 ಬಿಸಿಎ 2022**

**(ಕೋಟ ಶ್ರೀನಿವಾಸ ಪೂಜಾರಿ)**
**ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ**
**ಕಲ್ಯಾಣ ಇಲಾಖಾ ಸಚಿವರು**